ಅರಸೀಕೆರೆಯಲ್ಲಿರುವ ಕಾರ್ಬನ್ ಕಾರ್ಖಾನೆ ಸ್ಥಗಿತಗೊಂಡಿರುವ ಬಗ್ಗೆ.

1390 - ಶ್ರೀ ಕೆ.ಪಿ. ಪ್ರಭುಕುಮಾರ್ (ಅರಸೀಕೆರೆ) : ಮಾನ್ಯ ಸಣ್ಣ ಕೈಗಾರಿಕೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅರಸೀಕೆರೆಯಲ್ಲಿರುವ ಕಾರ್ಬನ್ ಕಾರ್ಖಾನೆ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಆ) *ಈ ಕಾರ್ಖಾನೆ ಸ್ಥಗಿತಗೊಳ್ಳಲು ಕಾರಣಗಳೇನು?*

ಇ) *ಈ ಕಾರಣಗಳನ್ನು ನಿವಾರಿಸಿ ಮತ್ತೆ ಎಂದಿನಿಂದ ಕಾರ್ಬನ್ ಕಾರ್ಖಾನೆಯನ್ನು ಆರಂಭಿಸಲಾಗುವುದು?*

ಶ್ರೀ ನಸೀರ್ ಅಹಮದ್ (ಸಣ್ಣ ಕೈಗಾರಿಕೆಗಳ ರಾಜ್ಯ ಸಚಿವರು) :

ಅ) ಬಂದಿದೆ

ಆ) ಯಂತ್ರಗಳಲ್ಲಿ ದೋಷ ಹಾಗೂ ಸಂಘ ಮತ್ತು ಸಲಹೆಗಾರರ ನಡುವೆ ಕಲಹದಿಂದ

ಇ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ಕೈಗಾರಿಕಾ ಶೆಡ್ಡುಗಳಿಗೆ ತಗುಲಿದ ವೆಚ್ಚ

1392 - ಶ್ರೀ ಇಲ್ಯಾಸ್ ವಿಜಯಕುಮಾರ್(ಹೊಸದುರ್ಗ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ 1984ರಿಂದ ಸರ್ಕಾರವು ಎಷ್ಟು ಕೈಗಾರಿಕಾ ಶೆಡ್ಡುಗಳನ್ನು ಕಟ್ಟಿಸಿರುವುದು. ಇದಕ್ಕೆ ತಗುಲಿದ ವೆಚ್ಚವೆಷ್ಟು? (ಜಿಲ್ಲಾವಾರು ವೆಚ್ಚದ ಮಾಹಿತಿ ನೀಡುವುದು).*

ಆ) *ಇದುವರೆಗೆ ಹೊಸದುರ್ಗ ತಾಲ್ಲೂಕಿನಲ್ಲಿ ನಿರ್ಮಿಸಿರುವ ಕೈಗಾರಿಕಾ ಶೆಡ್ಡುಗಳಿಗೆ ಖರ್ಚಾಗಿರುವ ಹಣವೆಷ್ಟು*

ಇ) *ಹೊಸದುರ್ಗ ಪಟ್ಟಣದಲ್ಲಿ ಇವುಗಳು ಬಳಕೆಯಾಗದೆ ಷೆಡ್‌ಗಳು ಖಾಲಿ ಇರುವ ಬಗ್ಗೆ ಸರ್ಕಾರವು ಕೈಕೊಳ್ಳಲಿರುವ ಕ್ರಮಗಳೇನು*

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು):

ಅ) 1521

ರೂ. 3078.71 ಲಕ್ಷಗಳು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ರೂ. 25. 31ಲಕ್ಷ

ಇ) ಸ್ಥಳೀಯ ಉದ್ದಿಮೆದಾರರನ್ನು ಆಕರ್ಷಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1. ಪದೇ ಪದೇ ಜಾಹೀರಾತನ್ನು ನೀಡುವುದು
2. ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮವನ್ನು ಏರ್ಪಡಿಸುವುದು.
3. ಹೆಚ್ಚುವರಿ ಮರುಪಾವತಿ 10 ವರ್ಷಗಳ ನಂತರ ಅವಧಿಯೊಂದಿಗೆ ಮಳಿಗೆಯ ವಿತರಣೆಯ ಬಗ್ಗೆ ಸಾಧ್ಯತೆ ಅಥವಾ ಬಾಡಿಗೆ ಆಧಾರದ ಮೇಲೆ ಪರಿವರ್ತನೆ.
4. ಮಳಿಗೆಯ ಮೌಲ್ಯದಲ್ಲಿ ಶೇಕಡ 15ರ ಕಡಿತ.